# ಸ್ಫುರದ್ರೂಪಿ ಖಳ!

1
ದೂರ ಕರಗಿ, ದಾರಿ ಮೂಡಿದೆ,
ಇಲ್ಲಿಂದೆಲ್ಲೆಲ್ಲಿಗೋ,
ಹತ್ತಿರವೇ ಅನಾಥವಾಗಿದೆ,
ಮೂಡಿ ಕಾಣದ್ದೊಂದು ಬಿರುಕು.
2
ಅಮ್ಮ ಅತ್ತ, ಮಗು ಇತ್ತ
ಅಳುವ ಧ್ವನಿಗಿಲ್ಲ ಸದ್ದು,
ಕಣ್ಣಿಗಿಲ್ಲ ಹನಿ ಕಣ್ಣೀರು!
3
ಭೀಕರ ಬರಗಾಲವೂ ಅಗಲಿಸಿದ್ದಿಲ್ಲ
ಕೂಡಿ ಇದ್ದೆವಂತೆ !
ನಾವು ಮತ್ತು ದನಕರುಗಳು!
4
ಇತ್ತಿಂದತ್ತ ಎಲ್ಲವನೂ ಹಂಚಿಕೊಂಡೂ
ಅಂತರ ಕಾಯ್ದುಕೊಳುವ ಗ್ಲಾಸು,
ಅಮ್ಮನನು ಮಗುವಿಂದ
ದೂರವಿಟ್ಟಿದೆ ಸ್ಫುರದ್ರೂಪಿ ಖಳನಂತೆ!
5
ಅಮ್ಮ ಬೇಡ ಈ ಮೊಬೈಲ್,
ಫಳ ಫಳ ಹೊಳೆವ ಗ್ಲಾಸು,
ಝಗಮಗಿಸುವ ಬೆಳಕಿನಾಟ,
ಎತ್ತಿಕೋ ನನ್ನನು, ಎದೆಗೊರಗುವೆ,
ನಾ ನಿನ್ನ ಕೂಸು!

**ಅಶೋಕ ಮಲ್ಲಪ್ಪ**



# ಎದೆಯ ಹಾಡು

ಕಣ್ಣ ಕಾಡಲಿ
ಕನಸುಗಳು ಕಾಣೆಯಾಗಿವೆ
ಗಾಜ ಗೂಡಿನಲ್ಲಿ
ಬಣ್ಣದ ನಾಳೆಗಳು ಮಾಯ, ಮಾಯ!
ಅವ್ವನೆದೆಯ ಬಿಸಿ
ತಬ್ಬಲಿಲ್ಲಿ ಗೋಡೆಯೊಂದು ತಕಧಿಮಿ
ನೋಡದ ನೋಟ
ನೋಡಲೆಂದು ಗುಲಾಬಿ ಇಲ್ಲಿ ಕನವರಿಸಿದೆ
ನೂರು ಮಾತು
ನೂರು ಮೌನ ಅಮ್ಮನೊಳಗೆ ಲೀನ
ಎಷ್ಟು ಆಸೆ
ಎಷ್ಟು ದೃಷ್ಟಿ ಹಾಡಾಗಿ ತನ್ನೆಡೆಗೆ ತಿರುಗಲೀಗ ಮೌನ!
ಒಳಗೆ ಅಮ್ಮ
ಹೊರಗೆ ಕಂದ
ನಡುವೆ ಹೂ ಮೊಬೈಲು ಅಡ್ಡಿ
ಎಂದು ಮುಗಿವುದೋ ಈ
ಜಗದ ಮಾತು
ನಿರೀಕ್ಷೆಗಳಷ್ಟೇ ಎದುರು ಇರುವ ಸವಾಲಿನ ಕಡ್ಡಿ!

**ಸಂತೆಬೆನ್ನೂರು ಫೈಜ್ನಟ್ರಾಜ್**